ಆ) ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಅವಶ್ಯಕತೆಯಿರುವ ಬಗ್ಗೆ ಸರ್ಕಾರ ಕೋರಿಕೆ ಬಂದಿದೆಯೇ ,

ಇ) ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮಾರ್ಗಸೂಚಿ ಪ್ರಕಾರ ಜನಸಂಖ್ಯೆ ಅನುಗುಣವಾಗಿ ಆಸ್ಪತ್ರೆ ಇರುತ್ತದೆ

ಆ) ಇಲ್ಲ

ಇ) ಈಗಾಗಲೇ ತಾಲ್ಲೂಕು ಮಟ್ಟದ ಕೊಳ್ಳೇಗಾಲ ಆಸ್ಪತ್ರೆಯನ್ನು 150 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಕೊಳ್ಳೇಗಾಲ ತಾಲ್ಲೂಕಿನ ಎಲ್ಲಾ ಆಸ್ಪತ್ರೆಗಳಲ್ಲಿ ಒಟ್ಟು 296 ಹಾಸಿಗೆಗಳಿವೆ ಪ್ರತಿ 1137 ಜನಸಂಖ್ಯೆಗೆ ಒಂದು ಹಾಸಿಗೆಯಂತೆ ಕಾರ್ಯ ನಿರ್ವಹಿಸುತ್ತಿರುತ್ತವೆ ಇದು ಮಾರ್ಗಸೂಚಿ ಪ್ರಕಾರ ಪ್ರತಿ 1500 ಜನಸಂಖ್ಯೆಗೆ ಒಂದು ಹಾಸಿಗೆಗಿಂತ ಉತ್ತಮವಾಗಿರುತ್ತದೆ ಆದುದರಿಂದ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು ಹೆಚ್ಚಿನ ಅವಶ್ಯಕತೆ ಇರುವುದಿಲ್ಲ

67 (182) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಗೆ ಕಳೆದ 2 ವರ್ಷಗಳಿಂದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳಿಗೆ ಎಷ್ಟೆಷ್ಟು ಹಣ ಮಂಜೂರಾಗಿವೆ , ಯೋಜನೆವಾರು ಪೂರ್ಣ ವಿವರ ನೀಡುವುದು ,

ಆ) ಇಲಾಖೆಯಿಂದ ತೆಗೆದುಕೊಂಡ ಕಾಮಗಾರಿಗಳ ಪ್ರಗತಿಯೇನು ,

ಇ) ಈ ಯೋಜನೆಯಿಂದ ಕ್ಷೇತ್ರಕ್ಕಾಗುವ ಪ್ರಯೋಜನ ಏನು ಹಾಗೂ ಪ್ರಯೋಜನ ಪಡೆದ ಫಲಾನುಭವಿಗಳು ಯಾರ್ಯಾರು , (ಪೂರ್ಣ ವಿವರ ನೀಡುವುದು) ,

ಈ) ಕ್ಷೇತ್ರವಾರು ಯಾವ ಯಾವ ಉದ್ದೇಶಗಳಿಗೆ ಇಲಾಖೆ ಕಾರ್ಯಕ್ರಮ ಕೈಗೊಳ್ಳುತ್ತಿದೆ ,

ಉ) ಕೊಳ್ಳೇಗಾಲ ಕ್ಷೇತ್ರದ ಯೋಜನೆ ಬಿಡುಗಡೆಗೊಳಿಸಿರುವ ಹಣ ಎಷ್ಟು, (ಪೂರ್ಣ ವಿವರ ನೀಡುವುದು) ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಕರ್ನಾಟಕ ಅಲ್ಪಸಂಖ್ಯಾತರ ನಿಗಮದಿಂದ ಚಾಮರಾಜನಗರ ಜಿಲ್ಲೆಗೆ ಕಳೆದ 2 ವರ್ಷಗಳಲ್ಲಿ ನಿಗದಿಪಡಿಸಿದ ಗುರಿ ಹಾಗೂ ಸಾಧನೆ ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ

ಕ್ರ ಸಂ	ಯೋಜನೆಗಳ ವಿವರ	2004–05 ಸಾಲಿನಲ್ಲಿ ಬಿಡುಗಡೆಯಾದ ಹಣ	2005–06ನೇ ಸಾಲಿನಲ್ಲಿ ಬಿಡುಗಡೆಯಾದ ಹಣ
1	ಅಲ್ಪಸಂಖ್ಯಾತರ ಕಾನೂನು ಪದವಿಧರರಿಗೆ ತರಬೇತಿ ಶಿಷ್ಯವೇತನ	11000	16000
2	ಐಟಿಐ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಸ್ಟೈಪೆಂಡ್ ನೀಡಿಕೆ	60000	60000
3	ಸಮುದಾಯ ಭವನ ನಿರ್ಮಾಣ	1500000	2500000

ಆ) ಕೊಳ್ಳೇಗಾಲ ಟೌನ್ ಬೆತಲ್ ಲೂಧರನ್ ಚರ್ಚ್ ಇವರು ನಿರ್ಮಿಸಿರುವ ಸಮುದಾಯ ಭವನ ನಿರ್ಮಾಣಕ್ಕೆ ರೂ 5 00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ

ಇ) ಈ ಸಮುದಾಯ ಭವನ ನಿರ್ಮಾಣದಿಂದ ಕ್ಷೇತ್ರದ ಅಲ್ಪಸಂಖ್ಯಾತರ ಜನಾಂಗದವರ ವಿವಾಹ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉಪಯೋಗವಾಗುತ್ತಿದೆ

ಈ) ಅಲ್ಪಸಂಖ್ಯಾತರ ಇಲಾಖಾ ಕಾರ್ಯಕ್ರಮಗಳಾದ ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಭೇತಿ ಶಿಷ್ಯವೇತನ ಐಟಿಐ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಸ್ಟೈಪಂಡ್ ನೀಡಿಕೆ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಮಂಜೂರಾತಿ ಕಾರ್ಯಕ್ರಮಗಳು ಅನುಷ್ಟಾನಗೊಳಿಸುತ್ತಿದೆ ಈ ಕಾರ್ಯಕ್ರಮಗಳು ಇಡೀ ಜಿಲ್ಲೆಗೆ ಅನ್ವಯುವಾಗುತ್ತಿದ್ದು, ಕ್ಷೇತ್ರವಾರು ವಿಂಗಡನೆಯಾಗಿ ಅನುಷ್ಟಾನವಾಗುತ್ತಿಲ್ಲ

ಉ) ಕೊಳ್ಳೇಗಾಲ ಕ್ಷೇತ್ರಕ್ಕೆ 2004–05 ಮತ್ತು 2005–06ನೇ ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ಹಣ ಖರ್ಚು ಮಾಡಲಾಗಿದೆ

1 ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಬೇತಿ ಶಿಷ್ಯವೇತನ ಮಂಜೂರಾತಿಗೆ	19,000
2 ಐಟಿಐ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮಂಜೂರಾತಿಗೆ	29,699
3 ಶಾದಿಮಹಲ್/ಸಮುದಾಯ ಭವನ ನಿರ್ಮಾಣಕ್ಕೆ	5 00

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಸಂಖ್ಯೆ 183ಕ್ಕೆ ಅನುಬಂಧ

ಕ್ರ ಸಂ	ಯೋಜನೆ	2004–05 ಆರ್ಥಿಕ		2005–06 ಆರ್ಥಿಕ	
		ಗುರಿ	ಸಾಧನೆ	ಗುರಿ	ಸಾಧನೆ
1	ಸ್ವಾವಲಂಬನಾ ಸಾಲದ ಯೋಜನೆ	5 78	5 04	4 04	5 30
2	ಗಂಗಾ ಕಲ್ಯಾಣ	18 10	10 32	0 70	1 30
3	ಅರಿವು	0 70	–	0 70	1 30
4	ನೇರ ಸಾಲ ಯೋಜನೆ	14 15	–	12 50	1 14
5	ಶ್ರಮಶಕ್ತಿ ಯೋಜನೆ	–	–	1 15	0 95

68 (217) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ) (ವಿಧಾನಸಭೆ ಸದಸ್ಯರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ AIDS-HIV-1, HIV-2 ರೋಗಗಳಿಂದ ನರಳುತ್ತಿರುವವರ ಸಂಖ್ಯೆ ಎಷ್ಟು? ರಾಜ್ಯ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ರೋಗಿಗಳು ಇದರಿಂದ ನರಳುತ್ತಿದ್ದಾರೆ,

ಆ) ಇವರುಗಳಿಗೆ ಯೋಗ್ಯ ಚಿಕಿತ್ಸೆ ನೀಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು ,

ಇ) ಈ ರೋಗ ಚಿಕಿತ್ಸೆಗಾಗಿ ವಿಶ್ವಬ್ಯಾಂಕ್, ಕೇಂದ್ರ ಸರ್ಕಾರ ಹಾಗೂ ಇತರೆ ಮೂಲಗಳಿಂದ ಸರ್ಕಾರಕ್ಕೆ ಬರುತ್ತಿರುವ ಹಣವೆಷ್ಟು , ಇದನ್ನು ಯಾವ ರೀತಿ ಸರ್ಕಾರವು ಬಳಸಿಕೊಳ್ಳುತ್ತಿದೆ,

ಈ) ರಾಜ್ಯದಲ್ಲಿ AIDS-HIV-1, HIV-2 ರೋಗಗಳಿಂದ ಮೃತಪಟ್ಟ ರೋಗಿಗಳ ಕುಟುಂಬದವರಿಗೆ ಪುನರ್ ವಸತಿಗಾಗಿ ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮವೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ 1987 ರಿಂದ ನವೆಂಬರ್ 2006ರ ವರೆಗೆ ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ 10,589 ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ